**ತಾಂತ್ರಿಕ ಶಿಕ್ಷಣ ನಿರ್ದೇಶಕರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಸಂಸ್ಥೆಯ ಬೋಧಕ/ಬೋಧಕೇತರ ಸಿಬ್ಬಂದಿಗಳ ಜೂನ್'17 ರ ಮಾಹೆಯ ಸರ್ಕಾರದ ಪಾಲಿನ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಹೆಚ್‌ಪಿಟಿ 2017, ಬೆಂಗಳೂರು, ದಿನಾಂಕ 13-04-2017, 06-04-2017
2. ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಹೆಚ್‌ಪಿಟಿ 2017, ಬೆಂಗಳೂರು, ದಿನಾಂಕ 10-07-2017
3. ಸರ್ಕಾರದ ಆದೇಶ ಸಂಖ್ಯೆ: ಇಡಿ 43 ಡಿಟಿಇ 2015, ದಿನಾಂಕ 04-03-2015
4. ಈ ಕಛೇರಿ ಟಿಪ್ಪಣಿ ಸಂಖ್ಯೆ: ಡಿಟಿಇ/03/ಇಜಿಯು/ಹೆಚ್‌ಆರ್‌ಎಂಎಸ್ (ಅನುದಾನಿತ) 2017, ದಿನಾಂಕ 21-07-2017

**ಪ್ರಸ್ತಾವನೆ:**

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಆದೇಶಗಳಲ್ಲಿ ಸರ್ಕಾರವು 2017-18 ನೇ ಸಾಲಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ಮುಂದುವರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮತಿ ಹಾಗೂ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಅನುಮತಿ ಆದೇಶವನ್ನು ನೀಡಿರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ 2017-18 ನೇ ಸಾಲಿನ ಆಯವ್ಯಯದ ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟ್ಟಿರುವ ಅನುದಾನಿತ ಡಿಪ್ಲೊಮಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಹೆಚ್.ಆರ್.ಎಂ.ಎಸ್ ಮೂಲಕ ವೇತನ ಬಟವಾಡೆ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಉಲ್ಲೇಖ (4) ರಲ್ಲಿ ನಿರ್ದೇಶನಾಲಯದ ಹೆಚ್‌ಆರ್‌ಎಂಎಸ್ ವಿಭಾಗದವರು ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಸಂಸ್ಥೆಯ ಜೂನ್'17 ರ ಮಾಹೆಯ ವೇತನ ರೂ. 49,34,360/- ಗಳನ್ನು ಹೆಚ್‌ಆರ್‌ಎಂಎಸ್ ತಂತ್ರಜ್ಞಾನದಲ್ಲಿ ತಯಾರಿಸಿದ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಸಂಸ್ಥೆಯ ಸಿಬ್ಬಂದಿಗಳಿಗೆ ಹೆಚ್.ಆರ್.ಎಂ.ಎಸ್ ಮೂಲಕ ಜೂನ್'17 ರ ಮಾಹೆಯ ವೇತನ ಬಿಡುಗಡೆ ಮಾಡಬಹುದಾಗಿದೆ.

2017-18 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಸಂಸ್ಥೆಯ ಜೂನ್'17 ರ ಮಾಹೆಯ ವೇತನ ಸರ್ಕಾರದ ಪಾಲಿನ ಶೇ. 100 ರಷ್ಟು ವೇತನಾನುದಾನವನ್ನು 2017-18 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಹೆಚ್.ಆರ್.ಎಂ.ಎಸ್ ಮೂಲಕ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**ಕಛೇರಿ ಆದೇಶ ಸಂ: ಡಿಟಿಇ 06 ಡಿವಿಪಿ (1) 2017/ (4) ಬೆಂಗಳೂರು, ದಿನಾಂಕ: 23-08-2017.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಸಿಬ್ಬಂದಿಗಳಿಗೆ ಜೂನ್'17 ರ ಮಾಹೆಗೆ ಸರ್ಕಾರದ ಪಾಲಿನ ಶೇ. 100 ರಷ್ಟು ವೇತನಾನುದಾನ ರೂ. 49,34,360/- (ರೂಪಾಯಿ ನಲವತ್ತೊಂಬತ್ತು ಲಕ್ಷದ ಮೂವತ್ತನಾಲ್ಕು ಸಾವಿರದ ಮುನ್ನೂರ ಅರವತ್ತು ಮಾತ್ರ) ಗಳನ್ನು ಹೆಚ್.ಆರ್.ಎಂ.ಎಸ್ ಮೂಲಕ ವೆಚ್ಚ ಭರಿಸಲು 2017-18 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

| SL NO | INST CODE | INSTITUTE NAME | DEO CODE | GROSS SALARY | DEDUC-TIONS | NET SALARY |
|---|---|---|---|---|---|---|
| 1 | 404 | THE GOVERNMENT EMPLOYEES POLYTECHNIC,TARIHAL, HUBLI | 0200ET0001E47 | 49,34,360 | 10,08,428 | 39,25,932 |

ಈಗ ಬಿಡುಗಡೆ ಮಾಡಿರುವ ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಜೂನ್'17 ರ ಮಾಹೆಯ ಸರ್ಕಾರದ ಪಾಲಿನ ವೇತನಾನುದಾನ ಒಟ್ಟು ರೂ. 49,34,360/- (ರೂಪಾಯಿ ನಲವತ್ತೊಂಬತ್ತು ಲಕ್ಷದ ಮೂವತ್ತನಾಲ್ಕು ಸಾವಿರದ ಮುನ್ನೂರ ಅರವತ್ತು ಮಾತ್ರ) ಗಳನ್ನು "ಮ್ಯಾನೇಜರ್, ಎಸ್.ಬಿ.ಐ, ಜಿ-ಸೇವಾ ಖಾತೆ ಸಂಖ್ಯೆ: 64056330834" ಇವರ ಹೆಸರಿಗೆ ಇದೇ ಉದ್ದೇಶಕ್ಕಾಗಿ ಸಿಎಸ್-8 ರಲ್ಲಿ ಡ್ರಾ ಮಾಡಿ ಚೆಕ್ಕನ್ನು ವಿತರಿಸಲು ಈ ಮೂಲಕ ಸೂಚಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:-

1. ಉಚ್ಚ ನ್ಯಾಯಾಲಯ, ಧಾರವಾಡ ಬೆಂಚ್‌ನ W.A No. 2476/2015; 2467/2015; 3600-4195/2015 c/wW.A No. 2467/2015 & 2714-3455/2015 ದಿನಾಂಕ 27-11-2015 ನ ತೀರ್ಪಿನನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
2. ವೇತನ ಬಿಲ್ಲಿನಲ್ಲಿ ನಿರ್ದೇಶಕರ ಅನುಮೋದನೆ ಪಡೆಯದೇ ವೇತನವಲ್ಲದೇ ಯಾವುದೇ ಮೊತ್ತವನ್ನು ಕ್ಲೇಮ್ ಮಾಡಬಾರದು. ಮಾಡಿದ್ದಲ್ಲಿ ಪ್ರಿನ್ಸಿಪಾಲರನ್ನೇ ನೇರ ಹೊರೆಗಾರರನ್ನಾಗಿ ಮಾಡಲಾಗುವುದು.
3. ಸರ್ಕಾರದಿಂದ ಅನುಮೋದನೆಗೊಂಡಿರುವ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವೇತನಾನುದಾನವನ್ನು ಪಡೆಯುವುದು.
4. ಯಾವುದೇ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದಲ್ಲಿ ಕೂಡಲೇ ನಿರ್ದೇಶಕರ ಗಮನಕ್ಕೆ ತರುವುದು.
5. ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದು ಕಂಡು ಬಂದಲ್ಲಿ ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
6. ಹೆಚ್.ಆರ್.ಎಂ.ಎಸ್ ಬಿಲ್ ಅನ್ನು ಪ್ರತಿ ತಿಂಗಳು 25 ನೇ ತಾರೀಖಿನೊಳಗೆ ನಿರ್ದೇಶನಾಲಯಕ್ಕೆ ತಪ್ಪದೇ ಕಳುಹಿಸುವುದು (ಇ-ಮೇಲ್ dte.dvp1@gmail.com), ವೇತನ ಬಿಡುಗಡೆ ಮಾಡಲು ತಡವಾದಲ್ಲಿ ಪ್ರಿನ್ಸಿಪಾಲರನ್ನೇ ಹೊಣೆ ಮಾಡಲಾಗುವುದು.
7. ***ಪ್ರತಿ ತಿಂಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸುವುದು. ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸದೇ ವೇತನವನ್ನು ತಾತ್ಕಾಲಿಕವಾಗಿ ತಡೆಹಿಡಿದಲ್ಲಿ ಪ್ರಿನ್ಸಿಪಾಲರುಗಳೇ ನೇರ ಹೊಣೆಗಾರರಾಗುತ್ತಾರೆ.***
8. ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ "Annual Accounts"ಅನ್ನು ಸಲ್ಲಿಸುವುದು.
9. ವಿದ್ಯಾರ್ಥಿ ಬೋಧನಾ ಶುಲ್ಕವನ್ನು ನಿಗದಿತ ಸಮಯದಲ್ಲಿ ಪಾವತಿಸುವುದು.

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.
23/8/17

ಇವರಿಗೆ,

1) ಪ್ರಿನ್ಸಿಪಾಲರು, ಎಸ್‌ಜಿಇಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್, ಹುಬ್ಬಳ್ಳಿ

ಪ್ರತಿ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಲೆಕ್ಕಾಧಿಕಾರಿಗಳು [ಬಿಲ್ಸ್]
5. ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಪ್ರಧಾನ ಕಛೇರಿ, ಬೆಂಗಳೂರು.
6. ಸಹಾಯಕಜನರಲ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಇ-ಸೇವಾ ಶಾಖೆ, ಶಿವಾಜಿನಗರ ಬೆಂಗಳೂರು.
7. ನಗದು ಶಾಖೆಗೆ
8. ಬಿಲ್ಸ್ ವಿಭಾಗಕ್ಕೆ
9. ಇ-ಗವರ್ನೆನ್ಸ್ ವಿಭಾಗ – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.